**ಮಾನ್ಯ ವಿಧಾನ ಪರಿಷತ್ತು ಸದಸ್ಯರುಗಳಾದ ಶ್ರೀಮತಿ ಭಾರತಿ ಶೆಟ್ಟಿ ಮತ್ತು ಶ್ರೀ ಎಂ. ನಾಗರಾಜು ಇವರುಗಳು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ**

**ವಿಷಯ:**

1) **ಶ್ರೀಮತಿ ಭಾರತಿ ಶೆಟ್ಟಿ:** ದಿನಾಂಕ:12.03.2025 ರ ಹೊಸದಿಗಂತ ದಿನಪತ್ರಿಕೆಯಲ್ಲಿ ಪ್ರಕಟವಾಗಿರುವಂತೆ ರಾಜ್ಯದ ಸಾರಿಗೆ ಇಲಾಖೆಯ ಪ್ರಾದೇಶಿಕ ಸಾರಿಗೆ (ಆರ್‌ಟಿಒ) ಕಛೇರಿಗಳಲ್ಲಿ ಆನ್‌ಲೈನ್ ಮೂಲಕ ಶುಲ್ಕ ಪಾವತಿಸುವ (ಯುಪಿಐ ಪಾವತಿ) ಸೌಲಭ್ಯವಿಲ್ಲದ ಕಾರಣ ವಿವಿಧ ಸೇವೆ ಪಡೆಯಲು ಕಛೇರಿಗಳಿಗೆ ಬರುವ ಸಾರ್ವಜನಿಕರು ನಗದು ಹಣವನ್ನು ಪಾವತಿ ಮಾಡಲು ಸಾಧ್ಯವಾಗದೇ ಇರುವ ಸಮಯದಲ್ಲಿ ಆನ್‌ಲೈನ್ ಪಾವತಿಯ ಮೊರೆಹೋಗುತ್ತಿದ್ದಾರೆ. ಆದರೆ, ರಾಜ್ಯದ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಆನ್‌ಲೈನ್ ಪಾವತಿ ಸೇವೆಯೇ ಇಲ್ಲದಿರುವುದರಿಂದ ಪರದಾಡುತ್ತಿದ್ದು, ಕಛೇರಿ ಕೆಲಸಗಳಲ್ಲಿಯೂ ವಿಳಂಬವಾಗುತ್ತಿದೆ. ಪ್ರಸ್ತುತ ರಾಜ್ಯದಲ್ಲಿ 66 ಪ್ರಾದೇಶಿಕ ಸಾರಿಗೆ ಕಛೇರಿಗಳಿವೆ. ವಾಹನ ಚಾಲನೆ ಕಲಿಕಾ ಪರವಾನಗಿ, ವಾಹನ ಚಾಲನಾ ಪರವಾನಗಿ ಹಾಗೂ ನವೀಕರಣ, ವಾಹನಗಳ ನೋಂದಣಿ ಮತ್ತು ನೋಂದಣಿ ಸಂಖ್ಯೆ ಹಂಚಿಕೆ, ವಾಹನಗಳ ಸಾಮರ್ಥ್ಯ ಪ್ರಮಾಣ ಪತ್ರ ವಿತರಣೆ, ಮಾರಾಟವಾದ ವಾಹನಗಳ ದಾಖಲೆಗಳ ಬದಲಾವಣೆ ಕಾರ್ಯ ಇಲ್ಲಿ ಪ್ರಮುಖವಾಗಿ ನಡೆಯುತ್ತದೆ. ಈ ಎಲ್ಲ ಸೇವೆಗಳಿಗೆ ಇಂತಿಷ್ಟು ಶುಲ್ಕವನ್ನು ನಿಗದಿ ಮಾಡಲಾಗಿದ್ದು, ಕೇಂದ್ರ ಸರ್ಕಾರದ ಪರಿವಾಹನ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಹಾಗೂ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ನಗದು ಹಣ ಪಾವತಿಸುವ ಮೂಲಕ ಸೌಲಭ್ಯ ಪಡೆಯಲು ಅವಕಾಶವಿದೆ. ಆದರೆ ಈ ವ್ಯವಸ್ಥೆಯು ರಾಜ್ಯ ಇಲಾಖೆಯ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಇಲ್ಲದಿರುವುದರಿಂದ ಆಗುತ್ತಿರುವ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರವು ಕೂಡಲೇ ಆನ್‌ಲೈನ್ ಪಾವತಿ ವ್ಯವಸ್ಥೆಯನ್ನು ಜಾರಿಗೆ ತರುವಂತೆ ಮಾನ್ಯ ಸಾರಿಗೆ ಸಚಿವರಿಗೆ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತೇನೆ.

2) **ಶ್ರೀ ಎಂ. ನಾಗರಾಜು:** ದಿನಾಂಕ:12.03.2025 ರಂದು "ನಗದಿಗಾಗಿ ಪರದಾಡುತ್ತಿರುವ ಸಾರ್ವಜನಿಕರು: ಆರ್‌ಟಿಒಗಳಲ್ಲಿಲ್ಲ ಯುಪಿಐ" ಎಂದು ಹೊಸ ದಿಗಂತ ದಿನ ಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

"ರಾಜ್ಯದ ಪ್ರಾದೇಶಿಕ ಸಾರಿಗೆ (ಆರ್‌ಟಿಒ) ಕಛೇರಿಗಳಲ್ಲಿ ಆನ್‌ಲೈನ್ ಮೂಲಕ ಶುಲ್ಕ ಪಾವತಿಸುವ (ಯುಪಿಐ ಪಾವತಿ) ಸೌಲಭ್ಯವಿಲ್ಲದ ಕಾರಣ ವಿವಿಧ ಸೇವೆ ಪಡೆಯಲು ಕಛೇರಿಗಳಿಗೆ ಬರುವ ಆನ್‌ಲೈನ್ ಪಾವತಿ ಅವಲಂಭಿಸಿರುವ ಸಾರ್ವಜನಿಕರಿಗೆ ತೀವ್ರ ಸಮಸ್ಯೆ ಎದುರಾಗಿದೆ.

ಈ ಎಲ್ಲಾ ಸೇವೆಗಳಿಗೆ ಇಂತಿಷ್ಟು ಶುಲ್ಕವನ್ನು ನಿಗಧಿ ಮಾಡಲಾಗಿದ್ದು, ಕೇಂದ್ರ ಸರ್ಕಾರದ ಪರಿವಾಹನ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಹಾಗೂ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ನಗದು ಹಣ ಪಾವತಿಸುವ ಮೂಲಕ ಸೌಲಭ್ಯ ಪಡೆಯಲು ಮಾತ್ರ ಅವಕಾಶವಿದೆ. ಆದರೆ, ಯುಪಿಐನಿಂದ ಹಣ ಪಾವತಿಸುವ ಸೌಲಭ್ಯ ಇಲ್ಲದಿರುವುದು ಅವಲಂಬಿತ ಜನರು ಪರದಾಡುವಂತಾಗಿದೆ" ಎಂದು ದಿನಪತ್ರಿಕೆಯಲ್ಲಿ ಪ್ರಕಟವಾಗಿದ್ದು, ಸಾರಿಗೆ ಇಲಾಖೆಯ ಅಧೀನದಲ್ಲಿ ಬರುವ ರಸ್ತೆ ಸಾರಿಗೆ ನಿಗಮಗಳಲ್ಲಿ ಇತ್ತೀಚಿಗೆ ಆನ್‌ಲೈನ್ ಪಾವತಿ ಪದ್ಧತಿಯನ್ನು ಜಾರಿಗೆ ತಂದಿರುವಂತೆ ಪ್ರಾದೇಶಿಕ ಸಾರಿಗೆ (ಆರ್‌ಟಿಒ) ಗಳಲ್ಲಿಯೂ ಆನ್‌ಲೈನ್ ಪಾವತಿ ಜಾರಿಗೆ ತರುವ ಕುರಿತು ಸೂಕ್ತ ಕ್ರಮ ಕೈಗೊಳ್ಳಲು ಮಾನ್ಯ ಸಾರಿಗೆ ಮತ್ತು ಮುಜರಾಯಿ ಇಲಾಖೆಯ ಸಚಿವರನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಉತ್ತರ:**

ಸಾರಿಗೆ ಇಲಾಖೆಯ ಚಾಲನಾ ಅನುಜ್ಞಾ ಪತ್ರ ಮತ್ತು ನೋಂದಣಿ ಪ್ರಮಾಣಪತ್ರ ಸೇವೆಗಳನ್ನು ಸುಲಲಿತವಾಗಿ ಸಂಪರ್ಕರಹಿತವಾಗಿ ಆನ್‌ಲೈನ್ ಮೂಲಕ ಒದಗಿಸುವ ಉದ್ದೇಶದಿಂದ ಅಧಿಸೂಚನೆಯನ್ನು ಹೊರಡಿಸಿದ್ದು, ದಿನಾಂಕ:01.11.2021 ರಿಂದ ಜಾರಿಗೆ ಬರುವಂತೆ ಸಾರಥಿ ತಂತ್ರಾಂಶದಲ್ಲಿ 15 ಮತ್ತು ವಾಹನ್ ತಂತ್ರಾಂಶದಲ್ಲಿ 17 ಸೇರಿ ಈ ಕೆಳಕಂಡ ಒಟ್ಟು 32 ಸೇವೆಗಳನ್ನು ಸಾರ್ವಜನಿಕರು ಆನ್‌ಲೈನ್ ಮೂಲಕ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

**SARATHI – ಸಾರಥಿ**

| ಕ್ರ. ಸಂ. | ಸೇವೆಗಳ ಹೆಸರು |
|---|---|
| 1 | ಕಲಿಕಾ ಚಾಲನಾ ಅನುಜ್ಞಾ ಪತ್ರ ನೀಡುವಿಕೆ |
| 2 | ಕಲಿಕಾ ಚಾಲನಾ ಅನುಜ್ಞಾ ಪತ್ರದಲ್ಲಿ ವಿಳಾಸ ಬದಲಾವಣೆ |
| 3 | ಕಲಿಕಾ ಚಾಲನಾ ಅನುಜ್ಞಾ ಪತ್ರದಲ್ಲಿ ಹೆಸರು ಬದಲಾವಣೆ |
| 4 | ನಕಲು ಕಲಿಕಾ ಚಾಲನಾ ಅನುಜ್ಞಾ ಪತ್ರ |
| 5 | ಅಂತರಾಷ್ಟ್ರೀಯ ಚಾಲನಾ ಪರವಾನಗಿ |
| 6 | ಚಾಲನಾ ಅನುಜ್ಞಾ ಪತ್ರ ವಹಿ |
| 7 | ಚಾಲನಾ ಅನುಜ್ಞಾ ಪತ್ರ ನವೀಕರಣ |
| 8 | ನಕಲು ಚಾಲನಾ ಅನುಜ್ಞಾ ಪತ್ರ ನೀಡುವಿಕೆ |
| 9 | ಚಾಲನಾ ಅನುಜ್ಞಾ ಪತ್ರದಲ್ಲಿ ವಿಳಾಸ ಬದಲಾವಣೆ |
| 10 | ಚಾಲನಾ ಅನುಜ್ಞಾ ಪತ್ರದಲ್ಲಿ ಹೆಸರು ಬದಲಾವಣೆ |
| 11 | ನಿರ್ವಾಹಕ ಚಾಲನಾ ಅನುಜ್ಞಾ ಪತ್ರ ನೀಡುವಿಕೆ |
| 12 | ನಿರ್ವಾಹಕ ಚಾಲನಾ ಅನುಜ್ಞಾ ಪತ್ರ ನವೀಕರಣ |
| 13 | ನಕಲು ನಿರ್ವಾಹಕ ಚಾಲನಾ ಅನುಜ್ಞಾ ಪತ್ರ ನೀಡುವಿಕೆ |
| 14 | ನಿರ್ವಾಹಕ ಚಾಲನಾ ಅನುಜ್ಞಾ ಪತ್ರದಲ್ಲಿ ವಿಳಾಸ ಬದಲಾವಣೆ |
| 15 | ನಿರ್ವಾಹಕ ಚಾಲನಾ ಅನುಜ್ಞಾ ಪತ್ರದಲ್ಲಿ ಹೆಸರು ಬದಲಾವಣೆ |

**VAHAN – ವಾಹನ್**

| ಕ್ರ. ಸಂ. | ಸೇವೆಗಳ ಹೆಸರು |
|---|---|
| 1 | ಹೊಸ ವಾಹನಗಳ ನೋಂದಣಿ (ಸಾರಿಗೇತರ ವಾಹನ) |
| 2 | ನಕಲು ನೋಂದಣಿ ಪ್ರಮಾಣಪತ್ರ ನೀಡುವಿಕೆ |
| 3 | ನೋಂದಣಿ ಪ್ರಮಾಣಪತ್ರದಲ್ಲಿ ವಿಳಾಸ ಬದಲಾವಣೆ |
| 4 | ವಾಹನದ ಕಂತು-ಕರಾರು ಒಪ್ಪಂದ ನಮೂದು |
| 5 | ವಾಹನದ ಕಂತು-ಕರಾರು ಮುಂದುವರಿಕೆ |
| 6 | ವಾಹನಗಳಿಗೆ ಆಕ್ಷೇಪಣಾ ರಹಿತ ಪ್ರಮಾಣಪತ್ರ ನೀಡುವಿಕೆ (ಎನ್ ಒ ಸಿ/ ಸಿಸಿ) |
| 7 | ವಾಹನ 'ಬಿ' ವಹಿ |
| 8 | ಸರಕು ಸಾಗಣೆ ವಾಹನ ರಹದಾರಿ ನೀಡುವಿಕೆ |
| 9 | ಮೋಟಾರುಕ್ಯಾಬ್ ರಹದಾರಿ ನೀಡುವಿಕೆ |
| 10 | ಮೋಟಾರು ಕ್ಯಾಬ್ ರಹದಾರಿ ನವೀಕರಣ |
| 11 | ಸರಕು ಸಾಗಣೆ ರಹದಾರಿ ನವೀಕರಣ |
| 12 | ಆಟೋರಿಕ್ಷಾ ಕ್ಯಾಬ್ ರಹದಾರಿ ನವೀಕರಣ |
| 13 | ಸರಕು ಸಾಗಣೆ ವಾಹನ ನಕಲು ರಹದಾರಿ ನೀಡುವಿಕೆ |
| 14 | ಮೋಟಾರು ಕ್ಯಾಬ್ ವಾಹನ ನಕಲು ರಹದಾರಿ ನೀಡುವಿಕೆ |
| 15 | ಆಟೋರಿಕ್ಷಾ ಕ್ಯಾಬ್ ನಕಲು ರಹದಾರಿ ನೀಡುವಿಕೆ |
| 16 | ರಹದಾರಿ ಅಧ್ಯರ್ಪಣ (ರಹದಾರಿ ರದ್ದತಿ) |
| 17 | ವಿಶೇಷ ರಹದಾರಿ (ಮೋಟಾರುಕ್ಯಾಬ್, ಮಾಕ್ಸಿಕ್ಯಾಬ್ ಮತ್ತು ಬಸ್ಸುಗಳಿಗೆ) |

ಸಾರಿಗೆ ಇಲಾಖೆಯು RTO/ARTO ಕಛೇರಿಗಳಲ್ಲಿ ಜನಸ್ನೇಹಿಯಾಗಿಸುವ ನಿಟ್ಟಿನಲ್ಲಿ ನಾಗರಿಕರು RTO/ARTO ಕಛೇರಿಗಳಿಗೆ ಭೇಟಿ ನೀಡದೆ ತಾವಿರುವ ಸ್ಥಳಗಳಿಂದನೇ ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಿ, ಆನ್‌ಲೈನ್ ವ್ಯವಸ್ಥೆಯ Net banking, Credit card / Debit Card, UPI ID / UPI QR code ಮೂಲಕ ಶುಲ್ಕ ಪಾವತಿಸುವ ಅವಕಾಶವನ್ನು ಕಲ್ಪಿಸಲಾಗಿದೆ.

ಟಿಡಿ 29 ಟಿಡಿಕ್ಯೂ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು.